# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



# ದೇವಾಲಯದ ಧರ್ಮಾಧಿಕಾರಿ ಯೇಸುವನ್ನು ಸಂಧಿಸಿದನು


ಬರಹಗಾರರು: Edward Hughes
ಚಿತ್ರಲೇಖಕರು: Byron Unger; Lazarus
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: M. Maillot; Sarah S.



60ರ 41ನೇ ಕಥೆ

**www.M1914.org**

***Bible for Children,*** *PO Box 3, Winnipeg, MB R3C 2G1 Canada*



**ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.**
**ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.**


ಕನ್ನಡ

Kannada

ಯೇಸು ಒಂದು ದಿವಸ ದೇವಾಲಯಕ್ಕೆ ಹೋದನು ಅಲ್ಲಿ ಜನರು ದೇವಾಲವನ್ನು ಕಡೆಗಣಿಸಿ ದನ ಕುರಿಯ ವ್ಯಾಪಾರವನ್ನು, ಹಣದ ವಿನೀಮಯವನ್ನು ದೇವಾಲಯದಲ್ಲೆ ಮಾಡುತ್ತಿದ್ದರು.



1

ಹುರಿಯಿಂದ ಒಂದು ಚಾವಟಿಯನ್ನು ಮಾಡಿ, ಅಲ್ಲಿ ವ್ಯಾಪಾರ ಮಾಡುತ್ತಿದ್ದವರನ್ನು ಯೇಸು ಓಡಿಸಿದನು. "ಈ ವಸ್ತುಗಳನ್ನು ತೆಗೆದುಕೊಂಡು ಹೋಗಿರಿ" ನನ್ನ ತಂದೆಯ ಮನೆಯನ್ನು ವ್ಯಾಪಾರದ ಸ್ಥಳವನ್ನಾಗಿ ಮಾಡಿದ್ದಿರಿ ಎಂದು ಹೇಳಿದನು. ಯೇಸು ತನ್ನ ತಂದೆಯ ಮನೆಯನ್ನು ಪ್ರೀತಿಸಿದನು.



2



ಅಲ್ಲಿದ್ದ ಧರ್ಮನಾಯಕರು ಯೇಸು ದೇವಾಲಯವನ್ನು ಖಾಲಿ ಮಾಡಿದ್ದರಿಂದ, ಆತನಿಗೆ ಅಧಿಕಾರ ಇದೇಯೊ? ಎಂದು ತಿಳಿದುಕೊಳ್ಳಲು ಆತನಿಂದ ಒಂದು ಸೂಚಕ ಕಾರ್ಯವನ್ನು ನಡೆಸಲು ಕೇಳಿಕೊಂಡರು, ಆಗ ಯೇಸು "ಈ ದೇವಾಲಯವನ್ನು ಕೆಡವಿ, ನಾನು ಇದನ್ನು ಮೂರು ದಿವಸದಲ್ಲಿ ಮತ್ತೆ ನಿಲ್ಲಿಸುವೆನು."

3



ಎಂದು ಹೇಳಿದನು ಇದು ಅಸಾಧ್ಯ. ಯಾಕೆಂದರೆ ಈ ದೇವಾಲಯವನ್ನು ಕಟ್ಟಲು **46** ವರ್ಷ ತೆಗೆದುಕೊಂಡಿತ್ತು.

4

ಆದರೆ ಯೇಸು ತನ್ನ ದೇಹದ ಬಗ್ಗೆ ಈ ಮಾತನ್ನು ಹೇಳಿದನು. ದೇವಾಲಯದ ಹಾಗೆ ಆತನ ದೇಹವು ಸಹ ದೇವರ ವಾಸಸ್ಥಳವಾಗಿತ್ತು. ಯೇಸು ಶಿಲುಬೆಯ ಮೇಲೆ ಸತ್ತು ಮೂರನೆಯ ದಿವಸದಲ್ಲಿ ದೇವರು ಅವನ್ನು ಎಬ್ಬಿಸುವನೆಂದು ಅವನಿಗೆ ತಿಳಿದಿತ್ತು.



5



ಆ ರಾತ್ರಿ, ದೇವಾಲಯದ ಒಬ್ಬ ನಾಯಕನು ಯೇಸುವನ್ನು ನೋಡಲು ಬಂದನು. ಆತನು ಮಾಡುವ ಅದ್ಭುತ ಕಾರ್ಯಗಳಿಂದ ದೇವರೆ ಈತನನ್ನು ಕಳುಹಿಸಿದ್ದಾನೆ ಎಂದು ತಿಳಿದುಕೊಂಡಿದ್ದನು. ನೀಕೋದೆಮನು, ಯೇಸುವಿನಿಂದ ಇನ್ನೂ ಹೆಚ್ಚಾಗಿ ಕಲಿಯಲು ಬಂದನು.

6



ಯೇಸು ಆತನಗೆ, ಜನರು ದೇವರು ರಾಜ್ಯಕ್ಕೆ ಸೇರಬೇಕಾದರೆ ಮೊದಲು ಹೊಸದಾಗಿ ಹುಟ್ಟಬೇಕು ಎಂದು ಹೇಳಿದನು. ಆದರೆ ಈ ಮಾತು ನೀಕೋದೆಮನಿಗೆ ಅರ್ಥವಾಗಲಿಲ್ಲ. ಮುದುಕನಾದವನು ಮತ್ತೆ ಮಗುವಾಗಲು ಸಾಧ್ಯವೇ? ಅದರಲ್ಲಿಯೂ ನೀಕೋದೆಮನು ದೇವಾಲಯದ ನಾಯಕನಾಗಿದ್ದನು. ಇಷ್ಟಿದ್ದರೂ ದೇವರ ರಾಜ್ಯಕ್ಕೆ ಸೇರಲಾಗುವುದಿಲ್ಲವಾ?

7



"ದೇಹದಿಂದ ಹುಟ್ಟಿದ್ದು ದೇಹವೇ, ಆತ್ಮನಿಂದ ಹುಟ್ಟಿದ್ದು: ದೇವರ ಆತ್ಮವು ಗಾಳಿಯಿದ್ದಂತೆ, ಜನರು ಅದನ್ನು ನೋಡಲಾಗುವುದಿಲ್ಲ ಆದರೆ ಆ ಗಾಳಿ ಏನನ್ನು ಮಾಡುತ್ತೆ ಅನ್ನುವುದನ್ನು ಮಾತ್ರ ನೋಡಲು ಸಾಧ್ಯ."

8


ಇಸ್ರಾಯಿಲನ ಮಕ್ಕಳು ಮೋಶೆಗೆ "ನಮಗೆ ಆಹಾರವಿಲ್ಲ, ನೀರಿಲ್ಲ
ಮತ್ತು ದೇವರು ಕೊಟ್ಟಂತ ಆಹಾರ ನಮಗೆ ಇಷ್ಟವಾಗತ್ತಿಲ್ಲ" ಎಂದು
ಮೊರೆಯಿಟ್ಟದ್ದನ್ನು ಯೇಸು ನೀಕೋದೇಮನಿಗೆ ನೆನಪಿಸಿದನು.
9


ಜನರ ಶಾಪಗಳು ದೇವರನ್ನು
ಕೋಪಗೋಳಿಸಿದವು. ದೇವರು
ಅವರ ಮಧ್ಯದಲ್ಲಿ ವಿಷಸರ್ಪಗಳನ್ನು
ಕಳುಹಿಸಲಾಗಿ, ಅನೇಕ ಜನರು ಅದರ
ಕಡಿತದಿಂದ ಸತ್ತರು.
10


"ನಾವು ಪಾಪಮಾಡಿದ್ದೇವೆ ಈ
ವಿಷಸರ್ಪಗಳನ್ನು ತೆಗೆದು ಹಾಕುವಂತೆವಂತೆ
ನಮಗಾಗಿ ದೇವರಲ್ಲಿ ಪ್ರಾರ್ಥಿಸು" ಎಂದು
ಜನರು ಮೋಶೆಗೆ ಬೇಡಿಕೊಂಡರು, ಆಗ
ಮೋಶೆ ಪ್ರಾರ್ಥಿಸಿದನು – ಆದರೆ ದೇವರು
ವಿಷ ಸರ್ಪಗಳನ್ನು ತೆಗೆಯಲಿಲ್ಲ.
11


ದೇವರು ಮೋಶೆಗೆ ವಿಷಸರ್ಪದ ಆಕಾರವನ್ನು ಮಾಡಿಸಿ
ಧ್ವಜಸ್ಥಂಬದ ಮೇಲೆ ಎತ್ತಿ ನಿಲ್ಲಿಸಲು ಹೇಳಿದನು,
"ಸರ್ಪಗಳಿಂದ ಗಾಯಪಟ್ಟವರಲ್ಲಿ ಯಾರುರು ಆ
ತಾಮ್ರದ ಸರ್ಪವನ್ನು ಲಕ್ಷವಿಟ್ಟು ನೋಡಿದರೋ
ಅವರೆಲ್ಲರೂ ಬದುಕುವರು" ಎಂದು ದೇವರು
ಪ್ರಮಾಣ ಮಾಡಿದನು. ಮೋಶೆಯು, ದೇವರು
ಹೇಳಿದ ಹಾಗೆ ತಾಮ್ರದ ಸರ್ಪವನ್ನು ಮಾಡಿ ನಿಲ್ಲಿಸಿದಾಗ
ನೋಡಿದವರೆಲ್ಲರೂ ಗುಣ ಹೊಂದಿದರು.
12


ಯೇಸು ನೀಕೋಧೆಮನಿಗೆ ದೇವರ
ಮನುಷ್ಯನು ಸಹ ತಾಮ್ರದ
ಸರ್ಪದ ಹಾಗೆ
ಎತ್ತಲ್ಪಡುವನು
ಎಂಬುವುದಾಗಿ
ಹೇಳಿದನು.
13


ಯೇಸು ಶಿಲುಬೆಯ ಕುರಿತಾಗಿ
ಮಾತಾಡಿದನು– ಅಂದರೆ
ಅದರ ಮೇಲೆ
ಪಾಪಗಳಿಗೋಸ್ಕರ
ಸಾಯುವುದನ್ನು
ಹೇಳಿದನು.
14













ದೇವಾಲಯದ ಧರ್ಮಾಧಿಕಾರಿ ಯೇಸುವನ್ನು ಸಂಧಿಸಿದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಯೋಹಾನ **2–3**, ಅರಣ್ಯಕಾಂಡ **21**

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ 119:130

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.